ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 03 ಸಿಡಿಸಿ (2) 2017-18 / 536

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ: 05-06-2017

## -:ನಿರಾಕ್ಷೇಪಣಾ ಪತ್ರ:-

ವಿಷಯ: 2017-18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗದ ಸಲುವಾಗಿ PGCET-2017ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ: ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಂದ ಬಂದ ಮನವಿ ಪತ್ರಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017-18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗದ ಸಲುವಾಗಿ ಕೆ ಇ ಎ ಬೆಂಗಳೂರು, ಇದರ ಮೂಲಕ PGCET-2017ಗೆ ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷೆ ಬರೆಯಲು ಈ ಕೆಳಕಂಡ ಉಪನ್ಯಾಸಕರುಗಳಿಗೆ ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ನಿರಾಕ್ಷೇಪಣಾ ಪತ್ರ ನೀಡಲಾಗಿದೆ.

| ಕ್ರ. ಸಂ. | ಹೆಸರು ಹಾಗೂ ಪದನಾಮ ಶ್ರೀ/ಶ್ರೀಮತಿ | ವಿಭಾಗ | ಸೇವೆಗೆ ಸೇರಿದ ದಿನಾಂಕ | ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ |
|---|---|---|---|---|
| 1 | ಶರತ್ ಜೆ ಉಪನ್ಯಾಸಕರು | ಇ & ಸಿ | 17-09-2012 | ಸರ್ಕಾರಿ ಪಾಲಿಟೆಕ್ನಿಕ್ ಹೊಳೆನರಸೀಪುರ |
| 2 | ಸಿದ್ದಲಿಂಗೇಶ್ವರ ಪಾಟೀಲ ಉಪನ್ಯಾಸಕರು | ಗಣಕಯಂತ್ರ | 22-02-2010 | ಸರ್ಕಾರಿ ಪಾಲಿಟೆಕ್ನಿಕ್, ಗದಗ |
| 3 | ರಮೇಶ ಕೆಂಚಪ್ಪನವರ ಉಪನ್ಯಾಸಕರು | ಯಾಂತ್ರಿಕ | 12-09-2012 | ಸರ್ಕಾರಿ ಪಾಲಿಟೆಕ್ನಿಕ್, ಗದಗ |
| 4 | ಪ್ರಕಾಶ್. ಎಂ ಉಪನ್ಯಾಸಕರು | ಗಣಕಯಂತ್ರ | ---- | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ |

| | | | | |
|---|---|---|---|---|
| 5 | ಸತೀಶ್.ಎಸ್ ಉಪನ್ಯಾಸಕರು | ಗಣಕಯಂತ್ರ | ---- | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ |
| 6 | ವಿನಯ್ ಭಟ್ ಉಪನ್ಯಾಸಕರು | ಗಣಕಯಂತ್ರ | —— | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ |
| 7 | ಪ್ರದೀಪ್ ಸಿ ಉಪನ್ಯಾಸಕರು | ಯಾಂತ್ರಿಕ | 17–09–2012 | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು |
| 8 | ರಾಜು.ಅ.ನದಾಫ ಉಪನ್ಯಾಸಕರು | ಗಣಕಯಂತ್ರ | 23–02–2010 | ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟ |
| 9 | ಶಾತಾಜಬೇಗಂ ನದಾಫ ಉಪನ್ಯಾಸಕರು | ಗಣಗಕಯಂತ್ರ | 18–10–2012 | ಸರ್ಕಾರಿ ಪಾಲಿಟೆಕ್ನಿಕ್, ಬಂಕಾಪುರ |

ಕೆ.ಸಿ.ಎಸ್.ಅರ್. ನಿಯಮ 61(3) ಹಾಗೂ ಅಪೆಂಡಿಕ್ಸ್ 2ಎ ನಿಯಮ Iರ ಉಪನಿಯಮ (1) ರಿಂದ (10)ರನ್ವಯ ಮತ್ತು ಅಪೆಂಡಿಕ್ಸ್ 2ಎ ನಿಯಮ IIರ ಉಪನಿಯಮ (1) ರಿಂದ (5)ರನ್ವಯ ಪೂರ್ಣಕಾಲಿಕ ನೆಲೆಯಲ್ಲಿ M.E/M.Tech (FullTime) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಐದು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಅರೆಕಾಲಿಕ ನೆಲೆಯಲ್ಲಿ M.E/M.Tech (QIP/Part Time) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಮೂರು ವರ್ಷಗಳ ಸಕ್ರಮ ಸೇವೆಯನ್ನು ಹಾಗೂ ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು ಮತ್ತು ವಯೋಮಿತಿ 48 ವರ್ಷದ ಒಳಗಿರಬೇಕು. ಈ ಹಿಂದೆ ಯಾವುದೇ ಉನ್ನತ ವ್ಯಾಸಂಗದ ಪೂರ್ಣಕಾಲಿಕ ನಿಯೋಜನೆ ಸೌಲಭ್ಯವನ್ನು ಪಡೆದಿರುವುದಿಲ್ಲವೆಂದು ಹಾಗೂ ವಿಭಾಗದಲ್ಲಿ ಸೂಕ್ತ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು ಸದರಿಯವರ ನಿಯೋಜನೆಯಿಂದ ಯಾವುದೇ ತೊಂದರೆಯಾಗುವುದಿಲ್ಲವೆಂದು ಸಂಸ್ಥೆಯ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.

ಪ್ರಾಚಾರ್ಯರು, ಅಂತಿಮವಾಗಿ 2017–18ನೇ ಸಾಲಿನಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ ಎಂ.ಟೆಕ್/ಎಂ.ಇ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಸರ್ಕಾರದ/ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ ಕೆ ಸಿ ಎಸ್ ಅರ್ ನಿಯಮ 61(3) ರ Appendix – 2 'ಎ' ಯ ನಿಯಮ 1 ರ ಉಪನಿಯಮ (1) ರಿಂದ (10) ರಲ್ಲಿ ನಮೂದಿಸಲಾದ ನಿಯಮಾನುಸಾರ ಎಲ್ಲಾ ದಾಖಲೆಗಳನ್ನು ಹಾಗೂ ಈ ಕಚೇರಿ ಸುತ್ತೋಲೆ ಸಂಖ್ಯೆ: ಡಿಟಿಇ 26 ಸಿಡಿಸಿ(2)2016–17,ದಿನಾಂಕ:14–07–2016ರಲ್ಲಿ ಸೂಚಿಸಿರುವಂತೆ, ಸೂಕ್ತ ಶಿಫಾರಸ್ಸಿನೊಂದಿಗೆ ದಾಖಲೆಗಳನ್ನು ಹಾಗೂ ಮಾಹಿತಿಗಳನ್ನು ದ್ವಿ–ಪ್ರತಿಗಳಲ್ಲಿ ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಸದರಿ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು. ಪೂರ್ಣಕಾಲಿಕ ಉನ್ನತ ವ್ಯಾಸಂಗಕ್ಕೆ ಸರ್ಕಾರದ ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಜಂಟಿ ನಿರ್ದೇಶಕರು(ಸಿಡಿಸಿ)

6/6/17

ಇವರಿಗೆ: 1. ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2. ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ, ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.

ಪ್ರತಿ: ಮೇಲ್ಕಂಡ ಉಪನ್ಯಾಸಕರುಗಳಿಗೆ, ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರ ಮುಖಾಂತರ.